ಮಾನ್ಯ ಸಭಾಧ್ಯಕ್ಷರು.—ಈ ಠರಾವಿನ ಪ್ರತಿಯನ್ನು ಸಂಬಂಧಪಟ್ಟವರೆಲ್ಲರಿಗೂ ಮತ್ತು ದುಃಖಿ ತಪ್ತರಾದವರಿಗೂ ಕಳುಹಿಸಿಕೊಡುತ್ತೇನೆ. ಮತ್ತು ಇದರ ಜೊತೆಯಲ್ಲೇ ಈ ದಿವಸ ಇನ್ನೊಂದು ದುಃಖಸೂಚಕವಾದಂಥ ಅನೇಕ ಗಣ್ಯ ವ್ಯಕ್ತಿಗಳ ಸಾವಿಗೆ ಸಂಬಂಧಪಟ್ಟಂಥ ಸಂತಾಪ ಸೂಚನಾ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಭಾರತದ ಮಾಜಿ ಉಪಪ್ರಧಾನ ಮಂತ್ರಿಗಳಾದ ಶ್ರೀ ವೈ. ಬಿ. ಚವಾಣ್‌ರವರು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

ಭಾರತದ ಮಾಜಿ ಉಪ ಪ್ರಧಾನ ಮಂತ್ರಿಗಳಾದ ಶ್ರೀ ವೈ. ಬಿ. ಚವಾಣ್‌ರವರು ದಿನಾಂಕ ೨೫-೧೧-೧೯೮೪ರಂದು ನಿಧನರಾದರು. ಇವರು ೧೯೬೪ ರಿಂದ ೧೯೭೦ ರವರೆವಿಗೆ ಸತತವಾಗಿ ಮೂರನೇ, ನಾಲ್ಕನೇ, ಐದನೇ ಮತ್ತು ಆರನೇ ಲೋಕಸಭೆಗೆ ಆಯ್ಕೆಯಾಗಿದ್ದರು. ೧೯೬೦ ರಿಂದ ೧೯೬೨ ರವರೆವಿಗೆ ಇವರು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದರು. ಅಲ್ಲದೆ ಎಂಟನೇ ಹಣಕಾಸು ಆಯೋಗದ ಅಧ್ಯಕ್ಷರು ಆಗಿದ್ದರು ಹಾಗೂ ಕೇಂದ್ರ ಮಂತ್ರಿಮಂಡಲದಲ್ಲಿ ರಕ್ಷಣೆ, ಹಣಕಾಸು, ಗೃಹ ಮತ್ತು ವಿದೇಶಾಂಗ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಇವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ದಕ್ಷ ಆಡಳಿತಗಾರರೂ ಮತ್ತು ಒಳ್ಳೆಯ ಸಮಾಜ ಸೇವಕರೂ ಆಗಿದ್ದರು.

ಕಳೆದ ಅಧಿವೇಶನದ ನಂತರ ಈ ಕೆಳಕಂಡ ಮಾಜಿ ಸದಸ್ಯರುಗಳು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ.

೧. ಶ್ರೀ ಚಿಗರಿಗೌಡ.—ಹಾಲಿ ಸದಸ್ಯರು ದಿನಾಂಕ ೨೧-೬-೧೯೮೪ ರಂದು ನಿಧನರಾದರು. ಅವರು ನಾಗಮಂಗಲ ಕ್ಷೇತ್ರದಿಂದ ೧೯೮೩ ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿದ್ದು ಸೇವೆಯನ್ನು ಸಲ್ಲಿಸಿರುತ್ತಾರೆ. ಅವರು ಈ ಸಭೆಯಲ್ಲೂ ಮತ್ತು ಹೊರಗಡೆಯಲ್ಲೂ ಅತ್ಯಂತ ಉತ್ತಮ ಸೇವೆಯನ್ನು ಸಲ್ಲಿಸಿರುವುದರಿಂದ ಇವರಿಗೂ ಕೂಡ ಈ ಸದನದ ವತಿಯಿಂದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

೨. ಶ್ರೀ ಹೆಚ್. ಎಸ್. ಬಕ್ಷಿ, ಮಾಜಿ ವಿಧಾನಸಭಾ ಸದಸ್ಯರು ದಿನಾಂಕ ೨೧-೬-೧೯೮೪ ರಂದು ನಿಧನರಾದರು ಇವರು ೧೯೭೮ ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜಾಪುರ ಕ್ಷೇತ್ರದಿಂದ ಕರ್ನಾಟಕ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

೩. ಶ್ರೀ ಟಿ. ಸಿದ್ದಲಿಂಗಯ್ಯ, ಮಾಜಿ ಕೈಗಾರಿಕಾ ಸಚಿವರು, ದಿನಾಂಕ ೨೭-೬-೧೯೮೪ ರಂದು ನಿಧನರಾದರು. ಇವರು ೧೯೫೯ ರಲ್ಲಿ ಹಿಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಅವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಮತ್ತು ಸಮಾಜ ಸೇವಕರಾಗಿದ್ದರು ಇವರು ೧೯೪೭ ರಿಂದ ೧೯೫೦ರ ತನಕ ಸಂಸತ್ ಸದಸ್ಯರಾಗಿದ್ದರು ಮತ್ತು ಮೈಸೂರು ವಿಧಾನಸಭೆಗೆ ನಡೆದ ಚುನಾವಣೆಗಳಲ್ಲಿ ಇವರು ಸತತವಾಗಿ ಎರಡನೇ, ಮೂರನೇ ಮತ್ತು ನಾಲ್ಕನೇ ಚುನಾವಣೆಗಳಲ್ಲಿ ದೊಡ್ಡಬಳ್ಳಾಪುರ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

೪. ಶ್ರೀ ದಯಾನಂದಸಾಗರ್, ರೇಷ್ಮೆ ಖಾತೆಯ ಮಾಜಿ ಉಪಸಚಿವರು, ದಿನಾಂಕ ೨೦-೭-೮೪ ರಂದು ನಿಧನರಾದರು. ಇವರು ಸ್ವಾತಂತ್ರ್ಯ ಸಂಗ್ರಾಮದ "ಕ್ವಿಟ್ ಇಂಡಿಯಾ" ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಅವರು ಚಾಮರಾಜಪೇಟೆ ಕ್ಷೇತ್ರದಿಂದ ೧೯೬೨ ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿದ್ದರು. ನಂತರ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅವರು ಒಳ್ಳೆಯ ಸಮಾಜಸೇವಕರು ಹಾಗೂ ಹಲವಾರು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದ್ದರು ಇವರು ಸಕ್ರಿಯ ಪತ್ರಿಕೋದ್ಯಮಿಯಾಗಿದ್ದರು.

೫. ಶ್ರೀ ಬಿ. ಹೆಚ್. ವೆಂಕಟರವಣಪ್ಪ, ಮಾಜಿ ಪ್ರಜಾಪ್ರತಿನಿಧಿ ಸದಸ್ಯರು. ಇವರು ದಿನಾಂಕ ೨೨-೯-೧೯೮೪ ರಂದು ನಿಧನರಾದರು. ಇವರು ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು.

೬. ಶ್ರೀ ಕೆ. ಪಿ. ಚಿಕ್ಕೇಗೌಡ, ಮಾಜಿ ವಿಧಾನಸಭಾ ಸದಸ್ಯರು ಹಾಗೂ ಸ್ವಾತಂತ್ರ್ಯ ಹೋರಾಟ ಗಾರರಾಗಿದ್ದ ಇವರು ೨೯-೧೦-೧೯೮೪ ರಂದು ನಿಧನರಾದರು. ಅವರು ನಾಲ್ಕನೇ ವಿಧಾನಸಭೆಗೆ ಸಕಲೇಶಪುರದ ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿದ್ದರು. ಇವರು ಸೇವಾಸಹಕಾರ ಸಂಘ; ಮತ್ತು ಗೃಹ ನಿರ್ಮಾಣ ಸಂಘಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಸೇವೆಯನ್ನು ಸಲ್ಲಿಸಿದ್ದಾರೆ.

೭. ಶ್ರೀ ಎಂ. ಮುನಿಸ್ವಾಮಿ ಮಾಜಿ ಕರ್ನಾಟಕ ಸಂವಿಧಾನ ಸಭಾ ಸದಸ್ಯರು. ಇವರು ದಿನಾಂಕ ೫-೧೦-೧೯೮೪ ರಂದು ನಿಧನರಾದರು. ಇವರು ಕೋಲಾರ ಜಿಲ್ಲೆಯ ದಲಿತವರ್ಗದ ಪರವಾಗಿ ನೇಮಕವಾಗಿದ್ದು ೧೯೪೯ ರಿಂದ ೧೯೫೦ ರ ತನಕ ಸಂವಿಧಾನ ಸಭಾಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೮. ಶ್ರೀ ಕಾರಿಗನೂರು ಪಟೇಲ್ ಹಾಲಪ್ಪನವರು, ಮಾಜಿ ಪ್ರಜಾಪ್ರತಿನಿಧಿ ಸದಸ್ಯರು ಇವರು ದಿನಾಂಕ ೨೩-೧೧-೮೪ ರಂದು ನಿಧನರಾದರು. ಇವರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇವರು ಮೈಸೂರು ಪ್ರಜಾಪ್ರತಿನಿಧಿ ಸದಸ್ಯರಾಗಿ ಜನ ಸೇವೆಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಸಚಿವರಾದ ಶ್ರೀ ಜೆ. ಹೆಚ್. ಪಟೇಲರು ಮಾನ್ಯ ಹಾಲಪ್ಪನವರ ಸಂಪುತ್ರರು, ಇವರಿಗೂ ಮತ್ತು ಇವರ ಕುಟುಂಬ ವರ್ಗದವರಿಗೂ ಈ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಕಳುಹಿಸಿ ಕೊಡುತ್ತೇನೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಒಂದು ನಿಮಿಷಕಾಲ ಎದ್ದುನಿಂತು ಮೌನವನ್ನಾಚರಿಸಿತು.)

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಅಧ್ಯಕ್ಷರು.—ಸಭೆಯನ್ನು ಅನಿರ್ದಿಷ್ಟಕಾಲದವರೆಗೆ ಮುಂದೂಡಿದ್ದೇನೆ.

ಸಭೆಯು ೧೨ ಗಂಟೆ ೪೨ ನಿಮಿಷಗಳಿಗೆ ಮುಂಕ್ತಾಯಗೊಂಡು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.